ಇದನ್ನು ಇನ್ನಷ್ಟು ಸ್ಪಷ್ಟವಾಗಿ 1984ರಲ್ಲಿ ಬರೆದ 'ಸ್ತ್ರೀವಾದ: ಅಂಚಿನಿಂದ ಕೇಂದ್ರದೆಡೆಗೆ' ಕೃತಿಯಲ್ಲಿ ಎಳೆಎಳೆಯಾಗಿ ಬಿಡಿಸಿಡುತ್ತಾರೆ.

ಎರಡನೇ ಹಂತದಲ್ಲಿ 'ಗಂಡು–ಹೆಣ್ಣಿನ' ಎದುರಾಳಿತನವನ್ನು ಮೀರಿ ಬೆಲ್ ಹುಕ್ಸ್ 'ಪಿತೃ ಪ್ರಧಾನತೆ' ಹೇಗೆ ಗಂಡು ಹೆಣ್ಣುಗಳನ್ನು ಕೂಡಿಯೇ ಬಲಿಪಶುಗಳನ್ನಾಗಿಸಿದೆ ಎನ್ನುವುದನ್ನು ವಿವರಿಸುತ್ತಾರೆ. ಜಗತ್ತಿನ ಗಂಡುಗಳಿಗೆ ತಗುಲಿದ 'ಪುರುಷ ಪಾರಮ್ಯ'ವೆಂಬ ಮಾರಣಾಂತಿಕ ರೋಗವನ್ನು ಗುರುತಿಸಿ, ನಂತರ ಈ ರೋಗವನ್ನು ವಾಸಿ ಮಾಡಲು ಮದ್ದನ್ನು ಕಂಡು ಹಿಡಿಯಲು ತನ್ನ ಅಧ್ಯಯನ ವಿಶ್ಲೇಷಣೆಯ ದೃಷ್ಟಿಕೋನವನ್ನು ತಿರುಗಿಸುತ್ತಾರೆ. ಮೂರನೇ ಹಂತದಲ್ಲಿ ಗಂಡೆಜಮಾನಿಕೆಯ ರೋಗವನ್ನು ವಾಸಿಮಾಡಲು, ಆಳವಾಗಿ ಬೇರೂರಿದ ಪುರುಷಾಧಿಪತ್ಯದ ಬೇರುಗಳನ್ನು ಕೀಳಲು ಗಂಡು–ಹೆಣ್ಣು ಒಟ್ಟಾಗಿ ಹೇಗೆ ಕೂಡು ಹೋರಾಟ ಮಾಡಬೇಕು ಎನ್ನುವುದನ್ನು ಬೆಲ್ ಹುಕ್ಸ್ ಹೇಳತೊಡಗುತ್ತಾರೆ. ಹೀಗೆ ಮದ್ದನ್ನು ಕಂಡುಹಿಡಿಯುವ ಪ್ರಕ್ರಿಯೆಯಲ್ಲಿ ಬರೆದ ಪುಸ್ತಕಗಳೆ, 1999ರಲ್ಲಿ 'ಆಲ್ ಎಬೌಟ್ ಲವ್', 'ಫೆಮಿನಿಸಂ ಫಾರ್ ಎವೆರಿಬಡಿ', 'ಸಾಲ್ವೇಷನ್: ಬ್ಲಾಕ್ ಪೀಪಲ್ ಅಂಡ್ ಲವ್', 'ಕಮ್ಯೂನಿಯನ್: ದಿ ಫೀಮೇಲ್ ಸರ್ಚ್ ಫಾರ್ ಲವ್' ಹಾಗೂ 'ದ ವಿಲ್ ಟು ಚೇಂಜ್: ಮೆನ್, ಮಸ್ಕುಲಿನಿಟಿ ಅಂಡ್ ಲವ್'. 'ವೆನ್ ಏಂಜೆಲ್ಸ್ ಸ್ಪೀಕ್ ಆಫ್ ಲವ್' ಅವರ ಕಾವ್ಯ ಸಂಕಲನ. ಈ ಪಯಣದಲ್ಲಿ ಬೆಲ್ ಹುಕ್ಸ್ ಕಂಡುಕೊಂಡ ಮದ್ದು 'ಪ್ರೀತಿ'ಯಾಗಿದೆ. ಈ ಪ್ರೀತಿಯು 'ವೈಯಕ್ತಿಕ' ನೆಲೆಯದಲ್ಲದೆ ಸಮುದಾಯಗಳ ಒಳಗಣ ಬಸಿಯುವ ಒರತೆಯಾಗಿದೆ. ಈ ಪ್ರೀತಿಯೆ ಪಿತೃಪ್ರಧಾನತೆಯ ಪೆಡಸುತನವನ್ನು ಮೆದುಗೊಳಿಸಿ ರೂಪಾಂತರಕ್ಕೆ ಅಣಿಗೊಳಿಸುತ್ತಲೇ ಗುಣಮುಖವಾಗಿಸುವ ಔಷಧವಾಗಿದೆ ಎನ್ನುತ್ತಾರೆ ಬೆಲ್ ಹುಕ್ಸ್.

ಮಹಿಳೆಯರು ಪ್ರೀತಿಯ ಸೆಲೆಗಳನ್ನು ಕಟ್ಟಿಕೊಳ್ಳುವ ನೆಲೆಯನ್ನು 'ಕಮ್ಯೂನಿಯನ್' (ಸಾಂಗತ್ಯ) ವಿವರಿಸಿದರೆ, ಗಂಡುಗಳು ಪ್ರೀತಿಯನ್ನು ಕಂಡುಕೊಳ್ಳುವ ಬಗೆಯನ್ನು 'ದ ವಿಲ್ ಟು ಚೇಂಜ್' (ಬಾರಯ್ಯ ಮಮಬಂಧು) ಕೃತಿಯಲ್ಲಿ ಚರ್ಚಿಸುತ್ತಾರೆ. ಕಪ್ಪು ಜನರು ಮೊದಲಿಗೆ ತಮ್ಮನ್ನು ತಾವು ಪ್ರೀತಿಸುವುದು ಹೇಗೆ, ಏಕೆ




**ಬಂಧಮುಕ್ತ**
ಮೂಲ: ಬೆಲ್ ಹುಕ್ಸ್
ಕನ್ನಡ ನಿರೂಪಣೆ: ಎಚ್.ಎಸ್. ಶ್ರೀಮತಿ
ಪುಟ: 286, ಬೆಲೆ: ರೂ. 320
ಪ್ರ: ಜೀರುಂಡೆ ಪ್ರಕಾಶನ, ಬೆಂಗಳೂರು
ಫೋನ್: 9742225779

ಕಪ್ಪು ಜನರಲ್ಲಿ ತಮ್ಮ ಬಗೆಗೆ ಕೀಳರಿಮೆ ಬೆಳೆಸುವಂತೆ ಪೂರ್ವಗ್ರಹಗಳನ್ನು ಹೆಣೆಯಲಾಗಿದೆ. ಕಪ್ಪು ಜನರು ಮತ್ತೆ ಪ್ರೀತಿಯ ಮಡಿಲಿಗೆ ಏಕೆ ಬರಬೇಕು? ಪ್ರೀತಿಯನ್ನೇ ವೇದಿಕೆಯನ್ನಾಗಿಸಿಕೊಂಡು ಜನಾಂಗೀಯ ಹೋರಾಟಗಳನ್ನು ಮುನ್ನಡೆಸಬೇಕಾದ ದಾರಿ ಯಾವುದು ಎನ್ನುವುದನ್ನು ಸಾಲ್ವೇಷನ್ (ಬಂಧಮುಕ್ತ) ಕೃತಿಯಲ್ಲಿ ಬೆಲ್‌ಹುಕ್ಸ್ ಶೋಧಿಸಿದ್ದಾರೆ. ಕಪ್ಪು ಜನರು ಪ್ರೀತಿಯ ನೈತಿಕತೆಗೆ ಮರಳಲು ಈ ಕೃತಿಯಲ್ಲಿ ಕರೆ ಕೊಡುತ್ತಾರೆ.

'ಬಂಧಮುಕ್ತ' ಕೃತಿಯಲ್ಲಿ ಸ್ವ–ಪ್ರೀತಿಯನ್ನು ಬೆಳೆಸಿಕೊಳ್ಳಬೇಕಾದ ರೀತಿಗಳಿಂದ ಮೊದಲುಗೊಂಡು